## ಕರ್ನಾಟಕ ಲೋಕಾಯುಕ್ತ

ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/1558/2022
ಪಿ.ಎ.ಆರ್.ಇ-5(ಮಂಡನಾಧಿಕಾರಿಯವರ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 15/06/2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** **ಶ್ರೀ ಮಹಾಂತೇಶ ತಂದೆ ವೀರಪ್ಪ ಚಿವಟಿಗುಂಡಿ, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಗಂಗಾವತಿ, ಕೊಪ್ಪಳ.** ಇವರು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

******

ಆರಕ್ಷಕ ನಿರೀಕ್ಷಕರು, ಲೋಕಾಯುಕ್ತ ಪೋಲಿಸ್ ಠಾಣೆ, ಕೊಪ್ಪಳ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ಶ್ರೀ **ಮಹಾಂತೇಶ ತಂದೆ ವೀರಪ್ಪ ಚಿವಟಿಗುಂಡಿ, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಗಂಗಾವತಿ, ಕೊಪ್ಪಳ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಶ್ರೀ **ಜೆ. ಶ್ರೀನಿವಾಸ ತಂದೆ ಜೆ. ಹನುಮಂತಪ್ಪ, ವಿಡಿಯೋಗ್ರಾಫಿ ಮತ್ತು ಸಾಫ್ಟವೇರ್ ಡಾಟಾ ಎಂಟ್ರಿ ಕೆಲಸ, ಗಂಗಾವತಿ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, 2011 ನೇ ಸಾಲಿನ ಸೆಪ್ಟಂಬರ್, ನವೆಂಬರ್, ಡಿಸೆಂಬರ್ ಹಾಗೂ 2012 ನೇ ಸಾಲಿನ ಜನವರಿ ಹಾಗೂ ಫೆಬ್ರವರಿ ತಿಂಗಳಿನಲ್ಲಿ ಗಂಗಾವತಿ ತಾಲ್ಲೂಕು ಸಿದ್ದಾಪುರ, ಕನಕಗಿರಿ, ಚಿಕ್ಕಬೆಣಕಲ್ ಗ್ರಾಮಗಳ ಮುರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಆಹಾರ ಧಾನ್ಯ ಸರಬರಾಜು ಮಾಡುವಾಗ ವಿಡಿಯೋ ಚಿತ್ರಿಕರಣ ಮಾಡಿದ ಬಾಬತ್ತು ಹಣವನ್ನು ಮಂಜೂರು ಮಾಡಲು ಎದುರುದಾರರು ರೂ. 10,000/- ಲಂಚಕ್ಕೆ ಬೇಡಿಕೆ ಇಟ್ಟ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ದಿ: 31/05/2012 ರಂದು ಕೊಪ್ಪಳ ಲೋಕಾಯುಕ್ತ ಪೋಲಿಸ್ ಠಾಣಾ ಗುನ್ನಾ ನಂ. 03/2012 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13 (1)(ಡಿ) ರೆ/ವಿ 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ತಯಾರಿಸಿದ್ದು, **ಸದರಿ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ದೊರೆತಿರುವುದಿಲ್ಲ.** ತನಿಖೆಯನ್ನು ಪರಿಶೀಲಿಸಲಾಗಿ ಎದುರುದಾರರು ಸಾರ್ವಜನಿಕ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ರೂ. 10,000/- ಲಂಚ ಪಡೆದುಕೊಂಡು ರೆಡ್ ಹ್ಯಾಂಡ್ ಆಗಿ ಸಿಕ್ಕಿ

ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2)ರ ಅನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ ಜಿ. ಶ್ರೀನಿವಾಸ ತಂದೆ ಜಿ. ಹನುಮಂತಪ್ಪ, ವಿಡಿಯೋಗ್ರಾಫಿ ಮತ್ತು ಸಾಫ್ಟವೇರ್ ಡಾಟಾ ಎಂಟ್ರಿ ಕೆಲಸ, ಗಂಗಾವತಿ** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, 2011 ನೇ ಸಾಲಿನ ಸೆಪ್ಟಂಬರ್, ನವೆಂಬರ್, ಡಿಸೆಂಬರ್ ಹಾಗೂ 2012 ನೇ ಸಾಲಿನ ಜನವರಿ ಹಾಗೂ ಫೆಬ್ರವರಿ ತಿಂಗಳಿನಲ್ಲಿ ಗಂಗಾವತಿ ತಾಲ್ಲೂಕು ಸಿದ್ದಾಪುರ, ಕನಕಗಿರಿ, ಚಿಕ್ಕಬೆಣಕಲ್ ಗ್ರಾಮಗಳ ಮುರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಆಹಾರ ಧಾನ್ಯ ಸರಬರಾಜು ಮಾಡುವಾಗ ವಿಡಿಯೋ ಚಿತ್ರಿಕರಣ ಮಾಡಿದ ಬಾಬತ್ತು 5 ತಿಂಗಳ ಹಣವನ್ನು ಮಂಜೂರು ಮಾಡಲು ದಿನಾಂಕ: 15/05/2012 ರಂದು ಎದುರುದಾರರನ್ನು ಭೇಟಿ ಮಾಡಿದಾಗ ತನ್ನ ಸ್ವಂತಕ್ಕೆ ರೂ. 10,000/- ಲಂಚವನ್ನು ನೀಡಬೇಕೆಂದು ಬೇಡಿಕೆ ಇಟ್ಟಿದ್ದು, ಸದರಿ ಬೇಡಿಕೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡಿರುತ್ತಾರೆ.

ii. ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ:31/05/2012 ರಂದು ಕೊಪ್ಪಳ ಲೋಕಾಯುಕ್ತ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.03/2012 ರಲ್ಲಿ, ಭ್ರಷ್ಟಾಚಾರ ನಿಗ್ರಹ ಕಾಯ್ದೆ ಕಲಂ 7, 13 (1)(ಡಿ) ರೆ/ವಿ 13(2) ಅಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಗುರುಬಸಪ್ಪ ಪಲ್ಲೇದ್ 2) ಅಂದಾನಗೌಡ ಪಾಟೀಲ್ (ನೆರಳುಸಾಕ್ಷಿ) ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ಲಂಚ ನೀಡಲು ತಂದ ರೂ. 10,000/- (500X20) ಗಳನ್ನು ಹಾಗೂ ಮೊಬೈಲ್‌ನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಮೊಬೈಲ್‌ನ ಚಿಪ್ಪಿನಲ್ಲಿ ರೆಕಾರ್ಡ ಆಗಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು

ಲಿಪಿಕರಿಸಿ ಸಿಡಿಗೆ ವರ್ಗಾಹಿಸಿಕೊಂಡಿರುತ್ತಾರೆ. ದೂರುದಾರರು ಹಾಜರುಪಡಿಸಿದ ನೋಟುಗಳ ನಂಬರುಗಳನ್ನು ಪಂಚರು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ಪೋಲಿಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಅಂದಾನಗೌಡ ಪಾಟೀಲ್ (ನೆರಳುಸಾಕ್ಷಿ) ಇವರ ಮೂಲಕ ದೂರುದಾರರ ಶರ್ಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಪಂಚ-2 ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಅಂದಾನಗೌಡ ಪಾಟೀಲ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕನ್ನಡಕವನ್ನು ತೆಗೆಯುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ ಮಾಡಿಕೊಳ್ಳಲು ದೂರುದಾರರಿಗೆ ವಾಯ್ಸ್ ರೆಕಾರ್ಡರ್ ನೀಡಿರುತ್ತಾರೆ ಈ ಎಲ್ಲಾ ಘಟನಾವಳಿಗಳನ್ನು ದಿ: 31-05-2012 ರಂದು ಬೆಳಿಗ್ಗೆ 11.15 ರಿಂದ ಮಧ್ಯಾಹ್ನ 12.30 ಘಂಟೆಯವರೆಗೆ ಕೊಪ್ಪಳ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii. ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿತಂಡದವರು ಪೊಲೀಸ್ ಠಾಣೆಯನ್ನು 12.40 ಕ್ಕೆ ಬಿಟ್ಟು, ಗಂಗಾವತಿ ತಾಲ್ಲೂಕ ಸಮಾಜ ಕಲ್ಯಾಣ ಕಛೇರಿಯನ್ನು 1.45 ಕ್ಕೆ ತಲುಪಿರುತ್ತಾರೆ. ದೂರುದಾರರನ್ನು ಹಾಗೂ ನೆರಳು ಸಾಕ್ಷಿಯನ್ನು ಸಮಾಜ ಕಲ್ಯಾಣ ಇಲಾಖಾ ಕಛೇರಿ ಒಳಗಡೆ ಕಳುಹಿಸಿ, ದಾಳಿತಂಡದವರು ಮರೆಯಲ್ಲಿ ಗುಪ್ತವಾಗಿ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ದೂರುದಾರರು ಕಛೇರಿಯ ಒಳಗೆ ಹೋಗಿದ್ದು ಎದುರುದಾರರು ಕಛೇರಿಯಲ್ಲಿ ಹಾಜರಿದ್ದು, ಹಣವನ್ನು ತಂದಿದ್ದಿಯಾ ಎಂದು ಕೈ ಸನ್ನೆ ಮೂಲಕ ಕೇಳಿ, ದೂರುದಾರರಿಂದ ಹಣವನ್ನು ಪಡೆದುಕೊಂಡು ಎರಡು ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟಿನ ಎಡ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಇದನ್ನು

ನೆರಳುಸಾಕ್ಷಿಯು ಬಾಗಿಲ ಮರೆಯಲ್ಲಿ ನಿಂತು ವೀಕ್ಷಿಸಿರುತ್ತಾರೆ. ಸುಮಾರು 2.00 ಘಂಟೆ ಸಮಯದಲ್ಲಿ ಎದುರುದಾರರು ಹಣ ಪಡೆದುಕೊಂಡಿದ್ದು, ತಕ್ಷಣ ದೂರುದಾರರು ದಾಳಿತಂಡದವರಿಗೆ ಸಂಜ್ಞೆ ನೀಡಿರುತ್ತಾರೆ. ದಾಳಿತಂಡದವರು ದೂರುದಾರರ ಹತ್ತಿರ ಬಂದು, ದೂರುದಾರರನ್ನು ವಿಚಾರಿಸಲಾಗಿ, ಎದುರುದಾರರನ್ನು ತೋರಿಸಿ, ಇವರೇ ತನ್ನಿಂದ ರೂ.10,000/- ಹಣವನ್ನು ಕೈ ಸಂಜ್ಞೆ ಮೂಲಕ ಕೇಳಿ ಪಡೆದುಕೊಂಡು ಎರಡು ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ನುಡಿದಿರುತ್ತಾರೆ. ಅದೇ ಪ್ರಕಾರ ನೆರಳುಸಾಕ್ಷಿಯನ್ನು ಕೇಳಲಾಗಿ ತಾನು ಬಾಗಿಲ ಮರೆಯಲ್ಲಿ ನಿಂತು ಗಮನಿಸಲಾಗಿ ಎದುರುದಾರರು ಸಂಜ್ಞೆ ಮಾಡಿ ಹಣ ತಂದಿದ್ದಿಯಾ ಎಂದು ಕೇಳಿ ಹಣ ಪಡೆದುಕೊಂಡು ಎಣಿಸಿ ತನ್ನ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡ ಬಗ್ಗೆ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಪರಿಚಯ ಮಾಡಿಕೊಂಡು ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ತನಿಖೆಗೆ ಸಹಕರಿಸಲು ಸೂಚಿಸಿರುತ್ತಾರೆ. ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಎದುರುದಾರರ ಎರಡು ಕೈ ಬೆರಳುಗಳನ್ನು ತೊಳೆಯಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಎದುರುದಾರರು ತಮ್ಮ ಪ್ಯಾಂಟ್ ಜೇಬಿನಿಂದ ಹಣವನ್ನು ತೆಗೆದು ಹಾಜರುಪಡಿಸಿದ್ದು, ಸದರಿ ಹಣವನ್ನು ಪಂಚರು ಈ ಮೊದಲೇ ದಾಖಲಿಸಿಕೊಂಡ ನೋಟುಗಳ ನಂಬರ್‌ಗಳೊಂದಿಗೆ ತಾಳೆ ಮಾಡಿ ನೋಡಲಾಗಿ, ತಾಳೆ ಹೊಂದಿದ ಮೇರೆಗೆ ಸದರಿ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ, ಹಣ ಇಟ್ಟುಕೊಂಡ ಎಡ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎದುರುದಾರರ ಟೇಬಲ್ ಮೇಲೆ ಇದ್ದ 17 ಸಾದಿಲ್‌ವಾರ್ ಬಿಲ್ಲಿನ ಕಾಗದ ಪತ್ರಗಳ ನಕಲುಗಳನ್ನು ತಯಾರಿಸಿ ಅವುಗಳನ್ನು ಎದರುದಾರರಿಂದ ದೃಢಿಕರಿಸಿ ಪಡೆದುಕೊಂಡಿರುತ್ತಾರೆ. ದೂರುದಾರರು ಟ್ರ್ಯಾಪ್ ಸಮಯದಲ್ಲಿ ತಾನು ವಾಯ್ಸ್ ರೆಕಾರ್ಡರ್ ಆನ್ ಮಾಡುವುದುನ್ನು ಮರೆತಿರುವುದದಾಗಿ ನುಡಿದಿರುತ್ತಾರೆ. ಎದುರುದಾರರಿಗೆ ತಮ್ಮ ಸಮಾಜಾಯಿಷಿಯನ್ನು ಬರೆದುಕೊಡಲು ತಿಳಿಸಿದ್ದು, ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಟ್ಟಿದ್ದೇನೆಂದರೆ, ಇಂದು ಮಧ್ಯಾಹ್ನ ಸುಮಾರು 1-45 ಕ್ಕೆ

ದೂರುದಾರರು ತಾನು ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿ ನಿಮಿತ್ತ ಹೂಮಾಲೆ, ಆಹ್ವಾನ ಪತ್ರಿಕೆ ಹಾಗೂ ಬ್ಯಾನರ್‌ಗಳನ್ನು ಪೂರೈಸುವ ಸಂಬಂಧವಾಗಿ ರೂ. 20.000/- ನೀಡಿದ್ದು ಅದರಲ್ಲಿ ಉಳಿದ ರೂ. 10,000/- ಗಳನ್ನು ದೂರುದಾರರು ತಂದು ಕೊಟ್ಟಿರುತ್ತಾರೆಂದು ಬರೆದುಕೊಟ್ಟಿರುತ್ತಾರೆ. ಸಮಜಾಯಿಷಿಯ ಬಗ್ಗೆ ದೂರುದಾರರನ್ನು ಹಾಗೂ ನೆರಳುಸಾಕ್ಷಿಯನ್ನು ಕೇಳಲಾಗಿ ಎದರುದಾರರು ಬರೆದುಕೊಟ್ಟ ಸಮಜಾಯಿಷಿಯು ಸುಳ್ಳಿನಿಂದ ಕೂಡಿರುತ್ತದೆ ಎಂದು ನುಡಿದಿರುತ್ತಾರೆ. ಮೇ 2012ನೇ ತಿಂಗಳ ಹಾಜರಾತಿ ಪುಸ್ತಕದ ನಕಲು ಪ್ರತಿಯನ್ನು ಪಡೆದುಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 31/05/2012 ರಂದು ಮಧ್ಯಾಹ್ನ 2.10 ರಿಂದ 4.40 ಗಂಟೆಂವರೆಗೆ ಗಂಗಾವತಿ ತಾಲ್ಲೂಕ, ಸಮಾಜ ಕಲ್ಯಾಣ ಇಲಾಖಾ ಕಛೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

ದಿನಾಂಕ: 06/07/2012 ರಂದು ತನಿಖಾಧಿಕಾರಿಗಳು ತಮ್ಮ ಪೋಲೀಸ್ ಠಾಣೆಗೆ ಗಂಗಾವತಿ ತಾಲ್ಲೂಕ, ಸಮಾಜ ಕಲ್ಯಾಣ ಇಲಾಖಾ ಕಛೇರಿಯಲ್ಲಿ ಕೆಲಸ ಮಾಡುವ ಪ್ರಥಮ ದರ್ಜೆ ಸಹಾಯಕ, ನಾಗರಾಜ ಅಳ್ಳೊಳ್ಳಿ ಇವರನ್ನು ಬರಮಾಡಿಕೊಂಡು, ಲಂಚ ಬೇಡಿಕೆಯ . ಸಂಭಾಷಣೆಯನ್ನು ನಾಗರಾಜ್ ಇವರಿಗೆ ಕೇಳಿಸಲಾಗಿ ಅದರಲ್ಲಿ ಇರುವ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ. ಈ ಬಗ್ಗೆ ಮೇಲೆ ಹೇಳಿದ ಪಂಚರ ಸಮಕ್ಷಮ ಮಹಜರ್ ಕ್ರಮ ಜರುಗಿಸಲಾಗಿರುತ್ತದೆ.

iv. ತನಿಖಾ ಕಾಲದಲ್ಲಿ ಎದರುದಾರರ ಎರಡು ಕೈ ಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದಾಗಿ ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಎದುರುದಾರರ ಅಧೀನ ನೌಕರನಾದ ನಾಗರಾಜ್ ಅಳ್ಳೊಳ್ಳಿ ಇವರು ಲಂಚ ಬೇಡಿಕೆಯ ಸಂಭಾಷಣೆಯಲ್ಲಿಯ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ.

v. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಲಯದ ಮುಂದೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಅಭಿಯೋಜನೆಗೊಳಿಸಲು ಅಭಿಯೋಜನಾ

ಮಂಜೂರಾತಿ ಆದೇಶವನ್ನು ನೇಮಕಾತಿ ಪ್ರಾಧಿಕಾರವು ತಿರಸ್ಕರಿಸಿರುತ್ತದೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯು ದಿ:15-09-2022 ರಂದು ಜಾರಿಯಾಗಿದ್ದು, ಈವರೆಗೂ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಗೌರವಾನ್ವಿತರ ಆದೇಶ ದಿ:03.03.2023 ರಂತೆ ಎದುರುದಾರರ ಸಮಜಾಯಿಷಿಯು ಏನು ಇಲ್ಲವೆಂದು ಪರಿಗಣಿಸಿ ಅಂತಿಮ ಪರಿಶೀಲನಾ ಟಿಪ್ಪಣಿಯನ್ನು ತಯಾರಿಸಲಾಗಿರುತ್ತದೆ.

4. ತನಿಖಾಧಿಕಾರಿಗಳು ಸಲ್ಲಿಸಿದ ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ರೂ.10,000/- ಲಂಚಕ್ಕೆ ಬೇಡಿಕೆಯಿಟ್ಟು ಹಣ ಪಡೆದುಕೊಳ್ಳುವಾಗ ರೆಡ್ ಹ್ಯಾಂಡ್ ಆಗಿ ಸಿಕ್ಕಿರುವುದರಿಂದ ದೂರನ್ನು ಮುಕ್ತಾಯಗೊಳಿಸಲು ಸಬಲವಾದ ಕಾರಣಗಳು ಇಲ್ಲವಾದರಿಂದ ಎದುರುದಾರರು ಇಲಾಖಾ ವಿಚಾರಣೆಗೆ ಒಳಪಡಲು ಭಾದ್ಯರಾಗಿರುತ್ತಾರೆ.

5. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ದೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕೆಸಿಎಸ್‌ಆರ್ (ನಡತೆ) ನಿಯಮ 1966 ನಿಯಮ 3(1) (i) to (iv) ಅನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

6. ಆದ್ದರಿಂದ ಎದುರುದಾರರ **ಶ್ರೀ ಮಹಾಂತೇಶ ತಂದೆ ವೀರಪ್ಪ ಚಿವಟಿಗುಂಡಿ, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಗಂಗಾವತಿ, ಕೊಪ್ಪಳ. (ವಯೋ ನಿವೃತ್ತಿ ದಿನಾಂಕ:31/07/2031)** ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅನ್ವಯ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

15/6/23

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**